

### ಎಡದಿಂದ ಬಲಕ್ಕೆ

1. ಹೊಸ ಕಾರ್ಯಕ್ಕೆ ಕೈಜೋಡಿಸಲು ಬಂದ 4
3. ಸಂಭಾವನೆ ಮತ್ತೆ ಸಿಕ್ಕೀತೆಂದು ಇಂಥ ಸಡಗರ 3
4. ರಾಜನ ಸಹವಾಸದಿಂದಾಗಿ ಬಂದದ್ದು ಅಂತಹದೇ ಗುಣ 3
6. ಪತನದತ್ತ ಸಾಗಿದ್ದಾನೆ ಮದ್ಯ ಸೇವಿಸಿ ಮೈಮರೆತವ 4
7. ಸಂತೃಪ್ತಿಯನ್ನು ಅರಸಿ ಆತ ವೆಂಕಟೇಶನ ಊರನ್ನು ತಲುಪಿದ್ದಾನೆ 4
9. ತವರೂರಿನಿಂದ ಪಡೆದು ತಂದ ವಸ್ತುಗಳು ಬಗೆ ಬಗೆ 4
12. ಸಭೆಯಲ್ಲಿದ್ದವರನ್ನೆಲ್ಲ ದುಷ್ಟರಿಂದ ರಕ್ಷಿಸಲು ಮಿಲಿಟರಿ ಶಕ್ತಿಯೇ ಸರಿ 4
14. ಬೈಯುತ್ತ ಬಂದವರಿಗೆ ನಮ್ಮ ರಾಷ್ಟ್ರದ ದರ್ಶನ ಹಿಂದುಮುಂದು 3
15. ರಾಗ, ತಾನಗಳನ್ನು ಹಾಡಿದ ನಂತರ ವಿಫಲವಾಯಿತು ಕೊನೆಯ ಭಾಗ 3
16. ಈ ಹೆದ್ದಾರಿಯಲ್ಲಿ ಪಯಣಿಸಲು ಬೇಕೇ ಬೇಕು ಒಪ್ಪಿಗೆ ಪತ್ರ 4

### ಮೇಲಿನಿಂದ ಕೆಳಕ್ಕೆ

1. ಮುಂಚಿನಂತಲ್ಲ; ಅವನದೀಗ ಏಳು ಬೀಳುಗಳಿಲ್ಲದ ಮನಸ್ಸು 4
2. ಕ್ರೂರ ಮಂತ್ರಿಯದೇ ಇದೆಲ್ಲ ಕೈಚಳಕ 4
3. ತ್ರಾಸವೇನನ್ನೂ ನೀಡದಂತಹವರು ಆಕೆಯ ಮಕ್ಕಳು 3
5. ಪೊಲೀಸರ ಜೊತೆಗೆ ಇದೆಂಥ ಸಂತಸದ ಮಾತು? 3
6. ಕೈಜಾರಿ ಪತನವಾಯಿತು, ಕೃಷ್ಣನಿಗೆ ಪ್ರಿಯವಾದ ಹೂವು 4
8. ಇದು ತಿಲಕದಾಕಾರದ ಕಾಳಿನಿಂದ ತೆಗೆದ ಎಣ್ಣೆ ತಾನೇ? 4
10. ತುಂಬ ಹುರುಪಿನಿಂದ ಬಂದಿದ್ದಾನೆ ನೋಡಿ ಕುದುರೆ ಸವಾರ 3
11. ಭಾರೀ ಆಭರಣ ಕೊಳ್ಳಲು ಹೋಗಿ ಸಾಲದ ಹೊರೆ ಹೊತ್ತು ಬಂದ 4
12. ಪರಿವಾರದ ಸೇವೆ ಮಾಡುವ ರೀತಿ ಹೀಗೇ ಏನು? 4
13. ಬಂಡವಾಳ ಸ್ವಲ್ಪವೂ ಇಲ್ಲವೆಂದರೆ ಖಂಡಿತ ಶ್ರೀಮಂತಳಲ್ಲ 3

---

## 18-07-2024 ಉತ್ತರಗಳು

### ಎಡದಿಂದ ಬಲಕ್ಕೆ

1. ಸಹಮತ 3. ಹರವಿ 4. ರಿಷಭ 6. ತಲುಪಿಸಿ 7. ಆತುರ 9. ಮುಸುಕು 11. ಶಕುನ 13. ಸುಲಿಕ (=ಕಲಿಸು ಹಿಂದುಮುಂದು ) 15. ಹವಾಮಾನ 17. ಲವಣ 18. ಳಿರುಸು (ಸುರುಳಿ ಹಿಂದುಮುಂದು) 19. ತೆಗಳಿಕೆ

### ಮೇಲಿನಿಂದ ಕೆಳಕ್ಕೆ

1. ಸವಿತ 2. ತರಿಸು 3. ಹಳತು 5. ಭರಿಸು 7. ಆವೇಶ 8. ರಚನ 9. ಮುನಿಸು 10. ಕುಹಕ 12. ಕುಟಿಲ 14. ಲಿಖಿಸು 15. ಹಣತೆ 16. ನಳಿಕೆ

ಪ್ರಶ್ನಾಂಕಣ

# ಜೀವಿವೈವಿಧ್ಯ: ದ. ಅಮೆರಿಕದಲ್ಲೇ ಏಕೆ ಗರಿಷ್ಠ?

ನಮ್ಮ ಪೃಥ್ವಿಯ ಜೀವಜಾಲದಲ್ಲಿ ಈವರೆಗೆ ಸುಮಾರು ಹತ್ತು ಲಕ್ಷ ಪ್ರಾಣಿ ಪ್ರಭೇದಗಳನ್ನೂ, ಏಳು ಲಕ್ಷ ಸಸ್ಯ ಪ್ರಭೇದಗಳನ್ನೂ ಗುರುತಿಸಿ ಹೆಸರಿಸಲಾಗಿದೆ. ಆದರೆ ವಾಸ್ತವವಾಗಿ ಇದಕ್ಕೆ ಏಳು ಪಟ್ಟು ಪ್ರಾಣಿ ಮತ್ತು ಸಸ್ಯ ಪ್ರಭೇದಗಳು ನಮಗೆ ಇನ್ನೂ ಅಜ್ಞಾತವಾಗಿ ಅಸ್ತಿತ್ವದಲ್ಲಿವೆ ಎಂದು ವಿದ್ವಾಂಸರು ಅಂದಾಜಿಸಿದ್ದಾರೆ! ಇಷ್ಟೂ ಜೀವಿ ಪ್ರಭೇದಗಳು ಭೂಖಂಡಗಳಲ್ಲಿ ಮತ್ತು ಸಾಗರಾವಾರದಲ್ಲಿ ವಿಭಿನ್ನ ಸಂಖ್ಯೆಗಳಲ್ಲಿ ಮತ್ತು ವಿಭಿನ್ನ ದಟ್ಟಣೆಗಳಲ್ಲಿ ಹರಡಿಕೊಂಡಿವೆ. ವಿಶೇಷ ಏನೆಂದರೆ, ಪೃಥ್ವಿಯ ಏಳೂ ಭೂಖಂಡಗಳ ಪೈಕಿ ದಕ್ಷಿಣ ಅಮೆರಿಕ ಖಂಡದಲ್ಲೇ (ಚಿತ್ರ1) ಗರಿಷ್ಠ ಸಂಖ್ಯೆಯ ಜೀವಿ ಪ್ರಭೇದಗಳು ನೆಲೆಗೊಂಡಿವೆ. ಏಕೆ ಹೀಗೆ?

ಏಕೆಂದರೆ ಜೀವಿಗಳ ಅಸ್ತಿತ್ವಕ್ಕೆ, ಬಾಳುವೆಗೆ ಮತ್ತು ವಿಕಸನಕ್ಕೆ ಪ್ರಶಸ್ತವಾದ, ಎಲ್ಲ ವಿಧಗಳ, ಬೇರಾವ ಭೂಖಂಡದಲ್ಲೂ ಇಲ್ಲದಷ್ಟು ಅನುಕೂಲಗಳು ದಕ್ಷಿಣ ಅಮೆರಿಕ ಖಂಡದಲ್ಲಿ ಮೇಳವಿಸಿವೆ. ನೀವೇ ಗಮನಿಸಿ:

- ದಕ್ಷಿಣ ಅಮೆರಿಕ ಖಂಡ ಪೃಥ್ವಿಯ ಸಮಭಾಜಕ ರೇಖೆಯ ಮೇಲಿದೆ. ಹಾಗಾಗಿ ಅಲ್ಲಿ ವರ್ಷಪೂರ್ತಿ ಬಿಸಿಲು ಮತ್ತು ಪ್ರತಿ ನಿತ್ಯವೂ ಮಳೆ. ಹಾಗೆ ಧಾರಾಳ ಸೂರ್ಯ ರಶ್ಮಿ ಮತ್ತು ನಿತ್ಯ ಮಳೆ ಸುರಿವ ಭೂ ಪ್ರದೇಶಗಳಲ್ಲಿ ಸಸ್ಯಗಳು ಕ್ಷಿಪ್ರವಾಗಿ ದಟ್ಟವಾಗಿ ಮತ್ತು ವೈವಿಧ್ಯಮಯವಾಗಿ ಬೆಳೆಯುತ್ತವೆ; ಅವುಗಳನ್ನಾಶ್ರಯಿಸಿ ಪ್ರಾಣಿಗಳೂ ದಟ್ಟೈಸುತ್ತವೆ. ಹಾಗಾಗಿಯೇ ದಕ್ಷಿಣ ಅಮೆರಿಕದಲ್ಲಿ 1100 ಉಪನದಿಗಳಿಂದ ಕೂಡಿದ ಅಮೆಜಾನ್ ನದೀ ಜಾಲ ಮೈದಳೆದಿದೆ (ಚಿತ್ರ 2) ಮತ್ತು ಅದನ್ನಾಶ್ರಯಿಸಿ ಐದೂವರೆ ದಶಲಕ್ಷ ಚದರ ಕಿಲೋಮೀಟರ್ ವೈಶಾಲ್ಯದ ಅಮೆಜಾನ್ ವೃಷ್ಟಿವನ (ಚಿತ್ರ 1ರಲ್ಲಿ ಬಾಣ 1 ಮತ್ತು 4 ಹಾಗೂ ಚಿತ್ರ 2) ದಟ್ಟೈಸಿ ನಿಂತಿದೆ; ಅಸಂಖ್ಯ ಪ್ರಾಣಿಗಳಿಗೆ ಆಶ್ರಯದಾಣವಾಗಿದೆ.




- ದಕ್ಷಿಣ ಅಮೆರಿಕ ಖಂಡದಲ್ಲಿ ಎಲ್ಲ ಬಗೆಯ ಜೀವಾವಾರಗಳೂ ಅಸ್ತಿತ್ವದಲ್ಲಿವೆ: ಪರ್ವತ ಜೀವಾವಾರ (ಆಂಡಿಸ್; ಚಿತ್ರ 1ರಲ್ಲಿ 3), ಅರಣ್ಯ ಜೀವಾವಾರ (ಅಮೆಜೋನಿಯಾ; ಚಿತ್ರ 1ರಲ್ಲಿ 4), ನದೀ ಜೀವಾವಾರ (ಅಮೆಜಾನ್ ನದೀ ಜಾಲ; ಚಿತ್ರ 1ರಲ್ಲಿ 1), ಜೌಗು ಜೀವಾವಾರ (ಪಾಂಟನಾಲ್; ಭೂಪಟದಲ್ಲಿ 2); ಹುಲ್ಲು ಬಯಲಿನ ಜೀವಾವಾರ (ಪಾಂಪಾಸ್; ಭೂಪಟದಲ್ಲಿ 5); ಮರುಭೂಮಿ ಜೀವಾವಾರ (ಅಟಕಾಮ) ಇತ್ಯಾದಿ. ಪ್ರತಿ ಜೀವಾವಾರದಲ್ಲೂ ಅಲ್ಲಿನ ಪರಿಸರಕ್ಕೆ ಹೊಂದಿದ ಜೀವರಾಶಿ; ಒಟ್ಟಾರೆ ಅಪಾರ ಜೀವಿ ಸಮೃದ್ಧಿ. ಆದ್ದರಿಂದಲೇ ದಕ್ಷಿಣ ಅಮೆರಿಕದಲ್ಲೇ ಗರಿಷ್ಠ ಜೀವಿ ವೈವಿಧ್ಯ.

■ ಎನ್. ವಾಸುದೇವ್